ಶ್ರೀ ಹೆಚ್. ಡಿ. ದೇವೇಗೌಡ.—ನಿಮಗೆ ಬಜೆಟ್ ಪುಸ್ತಕವನ್ನು ಕೊಟ್ಟಿದ್ದೇವೆ ಅದರಲ್ಲಿ ಏನಾದರೂ ತಾರತಮ್ಯ ಇದ್ದರೆ ಅದನ್ನು ನಮಗೆ ತಿಳಿಸಿದರೆ ನಾವು ತಿದ್ದಿಕೊಳ್ಳುತ್ತೇವೆ.

ಸಿಂಧನೂರು ತಾಲ್ಲೂಕಿನ ಜವಳಗೇರಾ ದಡೆಸೂರು ರಸ್ತೆಯ ಬಗ್ಗೆ

೪೨೫ ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಸಿಂಧನೂರು ತಾಲ್ಲೂಕಿನ ಜವಳಗೇರಾ ಧಡೆಸೂರು ರಸ್ತೆಯ ಅಲಬನೂರು ಹಳ್ಳದ ಸೇತುವೆ ಕಾರ್ಯವನ್ನು ಆರ್ಧಕ್ಕೆ ನಿಲ್ಲಿಸಲು ಕಾರಣವೇನು, ಹಾಗೂ ಅದನ್ನು ಯಾವಾಗ ಪೂರ್ಣ ಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಸೇತುವೆ ಕೆಲಸವನ್ನು ಗುತ್ತಿಗೆದಾರರ ಗುತ್ತಿಗೆಯನ್ನು ೧೯೮೫ ನೇ ಇಸವಿ ಫೆಬ್ರುವರಿ ಮಾಹೆಯಲ್ಲಿ ರದ್ದು ಮಾಡಲಾಗಿರುತ್ತದೆ. ಉಳಿದ ಕೆಲಸಗಳನ್ನು ಆದಷ್ಟು ಜಾಗ್ರತೆ ಪ್ರಾರಂಭಿಸಿ ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೆ. ಆರ್. ಪೇಟೆ ಸಂತೇಬಾಚಹಳ್ಳಿ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೪೩೧ ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೊಕೋಪಯೋಗಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣರಾಜಪೇಟೆ ಸಂತೇಬಾಚಹಳ್ಳಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಪರಿಗಣಿಸಲಾಗಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಯ ಅಭಿವೃದ್ಧಿಗೆ ಈ ವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಈ ರಸ್ತೆಯನ್ನು ಸಂಪೂರ್ಣ ಡಾಂಬರ್ ರಸ್ತೆಯನ್ನಾಗಿ ಮಾರ್ಪಡಿಸಿ ಈ ರಸ್ತೆಯಲ್ಲಿ ಬರುವ ಕೊಪ್ಪಗಹಳ್ಳಿ ಹಳ್ಳ ಚಿಕ್ಕಸಂದ್ರದ ಹಳ್ಳಗಳಿಗೆ ಸೇತುವೆಗಳನ್ನು ನಿರ್ಮಿಸಿ ಅಭಿವೃದ್ಧಿ ಪಡಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು, ಪರಿಗಣಿಸಲಾಗಿದೆ.

ಆ) ಈ ರಸ್ತೆಯ ಉದ್ದ ೨೪ ಕಿ. ಮೀ. ಇದ್ದು, ಇದರಲ್ಲಿ ೨೦ ಕಿ. ಮೀ. ಉದ್ದಕ್ಕೆ ಡಾಂಬರು ಹಾಕಲಾಗಿದೆ. ಉಳಿದ ಭಾಗವನ್ನು ಹಣದ ಕೊರತೆಯಿಂದ ಡಾಂಬರು ಹಾಕಲಾಗಿಲ್ಲ.

ಇ) ಬಾಕಿ ೪ ಕಿ. ಮೀ. ರಸ್ತೆ ಭಾಗಕ್ಕೆ ಡಾಂಬರ್ ಹಾಕುವುದನ್ನು ಮುಂದು ಕೊಪ್ಪಗಹಳ್ಳಿ ಮತ್ತು ಚಿಕ್ಕಸಂದ್ರದ ಹಳ್ಳಗಳಿಗೆ ಈಗಿರುವ ಕಾಸ್‌ವೇಗಳಿಗೆ ಬದಲು ಸೇತುವೆಗಳನ್ನು ಕಟ್ಟುವುದನ್ನು ಸಾಕಷ್ಟು ಹಣ ದೊರೆತಾಗ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಶ್ರೀ ಕೃಷ್ಣ.—ಇದು ಬಹಳ ಮುಖ್ಯವಾದ ರಸ್ತೆಯಾಗಿದೆ. ಪ್ರವಾಹ ಕಾಲದಲ್ಲಿ ಎರಡು ಹಳ್ಳಿಗಳಲ್ಲಿ ದಿನಗಟ್ಟಲೆ ಬಸ್ಸುಗಳು ನಿಲ್ಲಬೇಕಾಗುತ್ತದೆ. ಆದ್ದರಿಂದ, ಆದಷ್ಟು ಜಾಗ್ರತೆ ಅಲ್ಲಿ ಸೇತುವೆಗಳನ್ನು ಕಲ್ಪಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಂಪನ್ಮೂಲಗಳ ಸನ್ನಿವೇಶ ಉತ್ತಮಗೊಂಡಾಗ ಯೋಚಿಸುತ್ತೇವೆ.

ಸಣ್ಣ ನೀರಾವರಿ ಇಲಾಖೆಯಲ್ಲಿ ತಂಬೂಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ, ಭೀಮನ ಕಂಟೆ ಗ್ರಾಮದಲ್ಲಿ ಕೆರೆ ಕಟ್ಟಿಸುವ ವಿಚಾರ

೪೩೩ ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಅ) ೧೯೮೩-೮೪ ರಲ್ಲಿ ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿ ಭೀಮನಕುಂಟೆ ಕೆರೆಯೊಂದನ್ನು ನಿರ್ಮಿಸಲು ಮಂಜೂರಾತಿ ನೀಡಿರುವುದು ನಿಜವೇ ?

ಆ) ಸದರಿ ಕೆರೆಯ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಸದರಿ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಈ ಕೆಲಸವು ಆರ್ಥಿಕವಾಗಿ ಅಶಕ್ಯವಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ಗ್ರಾಮ ಮತ್ತು ಸುತ್ತಮುತ್ತಲ ಗ್ರಾಮಗಳು ರೀ-ಆರ್ಗನೈಜೇಷನ್ ಆದಾಗ ಆಂಧ್ರ ಪ್ರದೇಶದಿಂದ ಕರ್ನಾಟಕ ರಾಜ್ಯಕ್ಕೆ ಬಂದವು. ಅಂದಿನಿಂದ ಇಂದಿನವರೆಗೆ ಅಲ್ಲಿ ಒಂದು ಕೆರೆ ನಿರ್ಮಾಣ ಮಾಡಿಕೊಡುವಂತೆ ಕೇಳುತ್ತಿದ್ದೇವೆ. ಮಂತ್ರಿಗಳೂ ಕೆರೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವುದಕ್ಕೆ ಹಣದ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಮಧುಗಿರಿ ತಾಲ್ಲೂಕು ಸೆಂಟ್ರಲ್ ಡಿಪಿಎಪಿ. ಗೆ ಸೇರಿದೆ. ಆ ಕೆರೆಯನ್ನು ಪ್ರೊಪೋಸ್ ಮಾಡಿದಾಗ ನಾನು ಆ ಕ್ಷೇತ್ರದ ಸದಸ್ಯನಾಗಿದ್ದೆ. ಅದನ್ನು ಸ್ಪೆಷಲ್ ಕಾಂಪೋನೆಂಟ್ ಸ್ಕೀಂನಲ್ಲಿ ತೆಗೆದುಕೊಳ್ಳಬಹುದು, ಕಾರಣ ಅಲ್ಲಿ ಶೇಕಡ ೫೦ ರಷ್ಟು ಮಂದಿ ಹರಿಜನ ಗಿರಿಜನರು ಬರುತ್ತಾರೆ, ಮಿಕ್ಕವರು ಸಣ್ಣ ಹಿಡುವಳಿದಾರರು ಮತ್ತು ಅತೀ ಸಣ್ಣ ಹಿಡುವಳಿದಾರರು ಬರುತ್ತಾರೆ. ಆದ್ದರಿಂದ ಅದನ್ನು ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ ? ಮಧುಗಿರಿ ತಾಲ್ಲೂಕು ಡಿಪಿಎಪಿ ಯಲ್ಲಿ ಇನ್‌ಕ್ಲೂಡ್ ಆಗಿರುವುದರಿಂದ ಬೇಕಾದಷ್ಟು ಹಣ ಕೇಂದ್ರದಿಂದ ಬರುತ್ತದೆ. ಆದರೂ ಏತಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ?

ಶ್ರೀ ಹೆಚ್. ಡಿ. ದೇವೇಗೌಡ.—ಕೆರೆಯ ಅಂದಾಜನ್ನು ಮಾಡಿದ್ದೇವೆ. ಆದರಿಂದ ೫೦ ಎಕರೆಗೆ ನೀರಾವರಿಯಾಗುತ್ತದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆ ಕೆರೆ ನಿರ್ಮಾಣದಿಂದ ೧೬ ಎಕರೆ ಜಮೀನು ಮುಳುಗಡೆಯಾಗುತ್ತದೆಂದು ಹೇಳಿದ್ದಾರೆ. ನೀರಾವರಿಯಾಗುವುದಕ್ಕಿಂತ ಮುಳುಗಡೆಯಾಗುವ ಜಮೀನಿನ ಪ್ರಮಾಣ ಹೆಚ್ಚಾದರೆ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗುತ್ತದೆ. ಆದ್ದರಿಂದ, ಅಲ್ಲಿ ಕೆರೆ ನಿರ್ಮಾಣಕ್ಕೆ ಫೀಸಿಬಿಲಿಟಿ ಇಲ್ಲವೆಂದು ನನ್ನ ಮುಂದಿರತಕ್ಕ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ

ಶ್ರೀ ಜಿ. ಎಸ್. ಶಿವನಂಜಪ್ಪ.—೧೯೮೩-೮೪ರ ವರೆಗಿನ ಬಡ್ಜೆಟ್ಟಿನಲ್ಲಿ ಈ ಯೋಜನೆ ಇತ್ತು. ಟೆಕ್ನಿಕಲ್ ಫೀಸಿಬಿಲಿಟಿ, ಫೈನಾನ್ಸಿಯಲ್ ಫೀಸಿಬಿಲಿಟಿ ನೋಡಿಕೊಂಡು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ನೀವು ಹಣದ ಕೊರತೆಯಿಂದ ತೆಗೆದುಕೊಂಡಿಲ್ಲವೆಂದು ಹೇಳಿದ್ದೀರಿ. ಫೀಸಿಬಿಲಿಟಿ ಬರಲಿಲ್ಲವೆಂದು ನೀವು ಮಾಡಿಲ್ಲ. ಆ ಕೆರೆ ನಿರ್ಮಾಣದಿಂದ ೧೨ ಎಕರೆ ಜಮೀನು ಮಾತ್ರ ಮುಳುಗಡೆಯಾಗುತ್ತದೆ; ಅದೂ ಕೂಡ ಸರ್ಕಾರೀ ಜಮೀನು. ನಾನು ಆ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಅದು ಬಹಳಷ್ಟು ಅನುಕೂಲವಾಗಿರತಕ್ಕ ಜಾಗ. ಬಡವರನ್ನೇನು ಉದ್ಧರಿಸುತ್ತೇವೆಂದು ಹೇಳುತ್ತೀರಿ ಅಂಥ ಬಡವರಿಗೆ ಅನುಕೂಲವಾಗುವ ಜಾಗ ಅದು. ಆದಕ್ಕೆ ಹಣದ ಕೊರತೆ ಕೂಡ ಬರತಕ್ಕ ಸಾಧ್ಯತೆ ಇಲ್ಲ. ಕಾರಣ ಆದಕ್ಕೆ ಸೆಂಟ್ರಲ್ ಡಿಪಿಎಪಿ. ಹಣ ಇದೆ. ದಯವಿಟ್ಟು ಪರಿಶೀಲಿಸಿ ಆದಷ್ಟು ಜಾಗ್ರತೆ ಕೆಲಸ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೆಗೌಡ.—ಜನತಾ ಪ್ರತಿನಿಧಿಗಳಾದ ಸದಸ್ಯರು ಸರ್ಕಾರಕ್ಕೆ ಬರೆಯತಕ್ಕ ಆಧಾರದ ಮೇಲೆ ಕೆಲವು ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸುತ್ತೇವೆ. ಹಾಗೆ ಸೇರಿಸಿದಾಕ್ಷಣ ಅದಕ್ಕೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಫೀಸಿಬಿಲಿಟಿ ಇದೆ ಎಂಬ ಭಾವನೆ ಬರಬಾರದು. ಆ ಸ್ಥಳಕ್ಕೆ ಮುಖ್ಯ ಇಂಜಿನಿಯರ್ ಅವರನ್ನು ಕಳುಹಿಸಿಕೊಟ್ಟು ಅದನ್ನು ಮರು ಪರಿಶೀಲನೆ ಮಾಡಿಸುತ್ತೇನೆ.